**<u>ದಿನಾಂಕ 04-08-2025 ರಂದು ಪಿ.ಡಬ್ಲ್ಯೂ-1ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 1, 2, 4 ರಿಂದ 6ನೇ ಪ್ರತಿವಾದಿ ಪರ ಶ್ರೀ.ಡಿ ಟಿ ಬಿ ವಕೀಲರಿಂದಃ-</u>**

5. ದಾವಾ ಸ್ವತ್ತುಗಳು ಮೊದಲು ನನ್ನ ತಂದೆಯ ಹೆಸರಿನಲ್ಲಿ ಇದ್ದವು. ನನ್ನ ತಂದೆಗೆ ಸದರಿ ದಾವಾ ಸ್ವತ್ತುಗಳು ನನ್ನ ಅಜ್ಜನಿಂದ ಬಂದಿರುತ್ತವೆ. ನನ್ನ ಅಜ್ಜನ ಹೆಸರಿನಲ್ಲಿ ಒಟ್ಟು ಎಷ್ಟು

ಜಮೀನುಗಳು ಇದ್ದವು ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಅಜ್ಜನ ಮರಣಾನಂತರ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ದಾವಾ ಸ್ವತ್ತುಗಳನ್ನು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ತೋರಿಸಲು ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೇನೆ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಇವರ ಮಧ್ಯ ಆಸ್ತಿ ವಿಭಾಗ ಆಗಿದೆ ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ. ನನ್ನ ತಂದೆಯ ಪಾಲಿಗೆ ಎಷ್ಟು ಆಸ್ತಿಗಳು ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ನಿಮ್ಮ ತಂದೆಯ ಪಾಲಿಗೆ ಕುಂಚನೂರ ಗ್ರಾಮದ ಸರ್ವೆ ನಂ.84 ರಲ್ಲಿ 19 ಗುಂಟೆ ಮತ್ತು 14 ಗುಂಟೆ ಎರಡು ಪಟ್ಟಿಗಳು ಬಂದಿರುವ ಬಗ್ಗೆ ನಿಮಗೆ ಮಾಹಿತಿ ಇದೆಯಾ ? ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನ ದಾಖಲೆಗಳನ್ನು ನೀವು ನಿಮ್ಮ ವಕೀಲರಿಗೆ ಕೊಟ್ಟಿರುತ್ತೀರಾ ? ಎಂಬ ಪ್ರಶ್ನೆಗೆ ಸಾಕ್ಷಿಯು ಎಲ್ಲ ದಾಖಲೆಗಳನ್ನು ಸೇರಿಸಿ ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

6. ನಿಮ್ಮ ಕುಟುಂಬದ ಎಷ್ಟು ಜಮೀನುಗಳು ಮುಳುಗಡೆಯಾಗಿರುತ್ತವೆ ? ಎಂದು ವಕೀಲರು ಪ್ರಶ್ನಿಸಿದಾಗ ಸಾಕ್ಷಿಯು ಅವೆಲ್ಲಾ ನನಗೆ ಗೊತ್ತಿಲ್ಲ ಎಂದು ನುಡಿಯತ್ತಾರೆ. ಮುಳುಗಡೆಯಾದ ಜಮೀನಿನ ಪರಿಹಾರ ಹಣವನ್ನು ಪ್ರತಿವಾದಿಯರು ತೆಗೆದುಕೊಂಡಿರುತ್ತಾರೆ, ಆದರೆ ಎಷ್ಟು ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎಷ್ಟು ವರ್ಷಗಳ ಹಿಂದೆ ಪರಿಹಾರ ಹಣ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮುಳುಗಡೆ ಜಮೀನಿನ ಪರಿಹಾರ ಹಣ ನನಗೆ ಬಂದಿಲ್ಲ ಎಂದು ನಾನು ತಕರಾರು ಸಲ್ಲಿಸಿಲ್ಲ. ಸದರಿ ಮುಳುಗಡೆಯಾದ ಜಮೀನಿನ ಪರಿಹಾರದ ಹಣದಲ್ಲಿ ನಾನು ಪ್ರಸ್ತುತ ದಾವೆಯಲ್ಲಿ ಪಾಲು ಕೇಳಿಲ್ಲ. ಮನೆ ಮುಳುಗಡೆಯಲ್ಲಿ ಹೋಗಿದ್ದು, ಅದರ ಪರಿಹಾರ ಹಣವನ್ನು ನಾನು ಪಡೆದಿಲ್ಲ.

7. ಪ್ರತಿವಾದಿಯರು ದಾವಾ ಜಮೀನುಗಳ ಮೇಲೆ ಮಾಡಿರುವ ಸಾಲದ ಕುರಿತಾಗಿ ನಾನು ತಕರಾರು ಸಲ್ಲಿಸಿಲ್ಲ. 1 ರಿಂದ 4ನೇ ಪ್ರತಿವಾದಿಯರು ಪ್ರತ್ಯೇಕವಾಗಿ ವಾಸ ಮಾಡುತ್ತಾರೆ ಎಂದರೆ ಸರಿ. ಸದರಿ ಪ್ರತಿವಾದಿಯರು ತಮ್ಮ ಹೆಸರಿನಲ್ಲಿರುವ ಜಮೀನುಗಳ ಸಾಗುವಳಿಯನ್ನು ತಾವೇ ಪ್ರತ್ಯೇಕವಾಗಿ ಮಾಡುತ್ತಾರೆ ಎಂದರೆ ಸರಿ. 1986 ರಲ್ಲಿ ನನ್ನ ತಂದೆ ಮರಣಾನಂತರ ನಾನು ಮತ್ತು ನನ್ನ ಇತರೆ ಸಹೋದರಿಯರು ಸೇರಿ ದಾವಾ ಸ್ವತ್ತುಗಳಲ್ಲಿನ ಹಕ್ಕನ್ನು ನಮ್ಮ ಸಹೋದರರಿಗೆ ಬಿಟ್ಟು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಸ್ವತ್ತುಗಳನ್ನು ಭಾಗ ಮಾಡಿಕೊಂಡು, ತಮ್ಮ ತಮ್ಮ ಹಿಸ್ಸೆಗಳಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಮತ್ತು ದಾವಾ ಸ್ವತ್ತಿನಲ್ಲಿ ಕಾನೂನು ಬಾಹೀರವಾಗಿ ಪಾಲು ಪಡೆಯಬೇಕೆಂಬ ದುರುದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾನಂತರ ನಾನು ಮತ್ತು ನನ್ನ ಸಹೋದರಿಯರು ಸೇರಿ ನಮಗೆ ಆಸ್ತಿ ಬೇಡ ಎಂದು ತಹಶೀಲ ಕಾರ್ಯಾಲಯಕ್ಕೆ ಅರ್ಜಿ ನೀಡಿರುವ ಬಗ್ಗೆ ಮತ್ತು ಆ ಪ್ರಕಾರವಾಗಿ ಮುಟೇಶನ್ ಆದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹಿತ, ಈಗ ಇಲ್ಲ ಎಂದು  ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತುಗಳಲ್ಲಿ ಪಾಲು ಬೇಡಾ ಎಂದು ಹಕ್ಕು ಬಿಟ್ಟು ಕೊಟ್ಟರೂ ಸಹಿತ, ಈಗ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ, ಈ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಮರೆಮಾಚಿ ನಾನು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

RAJASHEKHAR Digitally signed by RAJASHEKHAR Date: 2025.08.05 17:56:24 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.